# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

1 ರಿಂದ 4ನೇ ಮಹಡಿ, 5ನೇ ಹಂತ, ಬಹುಮಹಡಿ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು
ಕಛೇರಿ ದೂರವಾಣಿ ಸಂಖ್ಯೆ: 080-22392203, ಫ್ಯಾಕ್ಸ್ ಸಂಖ್ಯೆ: 080-22392206
ಇ-ಮೇಲ್ ವಿಳಾಸ: kshrcmember@gmail.com / kshrc2007@gmail.com

ಹೆಚ್.ಆರ್.ಸಿ.ಸಂಖ್ಯೆ:1879/10/13/2015 (ಬಿ-3) ದಿನಾಂಕ:24.08.2020

ಇಂದ:

ವಿಲೇಖನಾಧಿಕಾರಿಗಳು,
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ,
ಬೆಂಗಳೂರು.

ಇವರಿಗೆ:

ರಿಜಿಸ್ಟ್ರಾರ್,
ಕರ್ನಾಟಕ ಮೆಡಿಕಲ್ ಕೌನ್ಸಿಲ್,
ಬೆಂಗಳೂರು.

ಮಾನ್ಯರೆ,

ವಿಷಯ:ಹೆಚ್.ಆರ್.ಸಿ.ಸಂಖ್ಯೆ:1879/10/13/2015 (ಬಿ-3) ಪ್ರಕರಣದ ಕುರಿತು.

******

ಮೇಲ್ಕಂಡ ಪ್ರಕರಣವನ್ನು ದಿನಾಂಕ:24.08.2020 ರಂದು ಆಯೋಗದ ಮುಂದೆ ಮಂಡಿಸಿದಾಗ, ಆಯೋಗವು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ:-

## ಆದೇಶ

**"ಶ್ರೀ ಮುರಳಿ ಬಿನ್ ಶ್ರೀರಾಮಪ್ಪ, ಅಗ್ರಹಾರ, ಸೋಮರಸನಹಳ್ಳಿ ಗ್ರಾಮ, ಚಾಮರಹಳ್ಳಿ ಅಂಚೆ, ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆ ರವರು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ದೂರು ಸಲ್ಲಿಸಿ, ಡಾ॥ ಶಂಕರ್‌ನಾಯಕ್ ಮತ್ತು ಶ್ರೀಧರ್ ನಾಯಕ್ ಕಣ್ಣಿನ ಆಸ್ಪತ್ರೆಯಲ್ಲಿ ದಿನಾಂಕ:05.12.2014 ರಂದು ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಿಸಿದ್ದು, ವೈದ್ಯರ ತೀವ್ರ ನಿರ್ಲಕ್ಷತೆ ಅಜಾಗರೂಕತೆಯಿಂದ ತನ್ನ ಎಡಕಣ್ಣಿನ ಶಸ್ತ್ರಚಿಕಿತ್ಸೆ ನಡೆಸಿ ಶಾಶ್ವತವಾಗಿ ಕಣ್ಣಿನ ದೃಷ್ಟಿ ಕಾಣದೆ ಕುರುಡುತನ ಮಾಡಿರುವುದರಿಂದ ಸದರಿಯವರ ವಿರುದ್ಧ ಕಾನೂನು ಕ್ರಮ ಜರುಗಿಸಿ ಸೂಕ್ತ ರಕ್ಷಣೆ ಹಾಗೂ ನ್ಯಾಯ ಒದಗಿಸುವಂತೆ ಕೋರಿದ್ದಾರೆ.**

**The Letter No:1879/10/31/2015 dated:22.06.2015 came up before Karnataka Medical Council on 11.07.2015 for a preliminary consideration. It is decided that the said letter dated 22.06.2015 is being treated as a complaint as per the provision of Karnataka Medical Registration Act and enquiry will be conducted and the results of the enquiry will be intimated to you in due course.**

ಸದರಿ ಪ್ರಕರಣವನ್ನು ದಿನಾಂಕ:02.11.2019 ರವರೆಗೆ ಮುಂದೂಡುತ್ತಾ ಬಂದಿದ್ದು, ಈ ಬಗ್ಗೆ ಆಯೋಗದಿಂದ ಹಲವಾರು ನೆನಪೋಲೆಗಳನ್ನು ಕಳುಹಿಸಿದ ನಂತರ ದಿನಾಂಕ:30.05.2020 ರ

ಪತ್ರದಲ್ಲಿ ಈ ಕೆಳಕಂಡಂತೆ ರಿಜಿಸ್ಟ್ರಾರ್, ಕರ್ನಾಟಕ ಮೆಡಿಕಲ್ ಕೌನ್ಸಿಲ್, ಬೆಂಗಳೂರು ರವರು ಈ ಕೆಳಕಂಡಂತೆ ವರದಿ ಸಲ್ಲಿಸಿದ್ದಾರೆ.

**Karnataka Medical Council would like to inform the Karnataka Medical Council Committee is not reconstituted after the Election for the members of the council which was held on January 2020. There are Election writ petitions filed before the High Court. Till reconstitution of the Council, enquiries are not conducted by the Council.**

**The said case is posted for cross Examination of Respondents/Doctors (1) & (2) by complainant Mr.Murali and also for submission of certified copy of medical records by Respondents/Doctors pertaining to the complainant Mr.Murali. The decision of KMC will be intimated to you after completion of the enquiry and legal procedure.**

ದೂರು ಮತ್ತು ರಿಜಿಸ್ಟ್ರಾರ್, ಕರ್ನಾಟಕ ಮೆಡಿಕಲ್ ಕೌನ್ಸಿಲ್, ಬೆಂಗಳೂರು ಅವರ ವರದಿಯನ್ನು ಪರಿಶೀಲಿಸಲಾಗಿ, 2020 ರ ಜನವರಿಯಲ್ಲಿ ಕರ್ನಾಟಕ ಮೆಡಿಕಲ್ ಕೌನ್ಸಿಲ್ ಸದಸ್ಯರ ಚುನಾವಣೆ ನಡೆದ ನಂತರ ಚುನಾವಣೆ ಬಗ್ಗೆ ಘನ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ದಾಖಲಿಸಿದ್ದು, ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವುದರಿಂದ ಮೆಡಿಕಲ್ ಕೌನ್ಸಿಲ್ ಕಮಿಟಿಯನ್ನು ಪುನರ್ ರಚಿಸಿರುವುದಿಲ್ಲ. ಕಮಿಟಿ ರಚನೆಯಾಗುವವರೆಗೆ ವಿಚಾರಣೆ ನಡೆಸಲು ಸಾಧ್ಯವಾಗುವುದಿಲ್ಲವೆಂದು ವರದಿ ಮಾಡಿರುವುದರಿಂದ ಹಾಗೂ ಈ ಪ್ರಕರಣ 2015 ರಿಂದ ಬಾಕಿ ಇರುವುದರಿಂದ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.

ಮುಂದುವರೆದು ಕರ್ನಾಟಕ ಮೆಡಿಕಲ್ ಕೌನ್ಸಿಲ್ ಕಮಿಟಿ ಪುನರ್ ರಚಿಸಿದ ನಂತರ ಪ್ರಕರಣವನ್ನು ಕಮಿಟಿಯ ಮುಂದೆ ಮಂಡಿಸಿ, ಕಮಿಟಿಯು ಕೈಗೊಳ್ಳುವ ತೀರ್ಮಾನದಂತೆ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ಅನುಪಾಲನಾ ವರದಿ ಸಲ್ಲಿಸುವಂತೆ ರಿಜಿಸ್ಟ್ರಾರ್, ಕರ್ನಾಟಕ ಮೆಡಿಕಲ್ ಕೌನ್ಸಿಲ್, ಬೆಂಗಳೂರು ಅವರಿಗೆ ಸೂಚಿಸಲಾಗಿದೆ."

Sd/-
(ಶ್ರೀ ಆರ್.ಕೆ.ದತ್ತ)
ಸದಸ್ಯರು

ಮೇಲ್ಕಂಡ ಆದೇಶದಂತೆ, ಈ ಆದೇಶದ ಪತ್ರವನ್ನು ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ,

3/9/20

ಸಹಾಯಕ ವಿಲೇಖನಾಧಿಕಾರಿ,
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

ಪ್ರತಿ: ಶ್ರೀ ಮುರಳಿ ಬಿನ್ ಶ್ರೀರಾಮಪ್ಪ, ಅಗ್ರಹಾರ, ಸೋಮರಸನಹಳ್ಳಿ ಗ್ರಾಮ, ಚಾಮರಹಳ್ಳಿ ಅಂಚೆ, ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆ ಇವರ ಮಾಹಿತಿಗಾಗಿ.